ಆ) ಭೀದರ್ ಜಿಲ್ಲೆಗೆ ವಿಶೇಷ ಘೋಷಣೆಯಾದ ಪ್ಯಾಕೇಜನಲ್ಲಿ ಈಗಾಗಲೇ ರೂ. 96.89 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ.

ಇ) ಬಂದಿದೆ.

ಈ) ಬಸವಕಲ್ಯಾಣ ಅಭಿವೃದ್ಧಿ ಮಂಡಳಿಯ ಅಭಿವೃದ್ಧಿ ಕಾರ್ಯಗಳಿಗಾಗಿ 2005–06ನೇ ಸಾಲಿನ ಅಯವ್ಯಯದಲ್ಲಿ 5.00 ಕೋಟಿ ರೂಗಳ ಅವಕಾಶ ಕಲ್ಪಿಸಲಾಗಿದೆ. ಹಂತ ಹಂತವಾಗಿ ಹಣ ಬಿಡುಗಡೆಗೊಳಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 5809ರ ಅನುಬಂಧ

ಕ್ರಮ ಸಂಖ್ಯೆ	ಪ್ಯಾಕೇಜ್	ಒದಗಿಸಿರುವ ಅನುದಾನ ರೂ.ಕೋಟಿ	ಬಿಡುಗಡೆಯಾಗಿರುವ ಅನುದಾನ ರೂ.ಕೋಟಿ
1	Minor Irrigation	6.00	1.730
2	Major Irrigation	100.00	6.710
3	PWD	63.50	37.300
4	Rural Roads	5.00	5.000
5	Rural watersupply	6.00	5.450
6	Health	35.00	5.000
7	Education	4.85	0.950
8	Urban Development	126.00	21.500
9	Horticulture	8.00	0.220
10	Bkalyan Development Authority	10.00	0.000
11	Social welfare	5.90	3.900
12	Women & child Development	1.50	0.213
13	Tourism	1.00	0.000
14	Special food for work	9.60	8.918
	TOTAL	**382.35**	**96.89**

5280(6173) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವದತ್ತಿ ತಾಲ್ಲೂಕಿನಲ್ಲಿ ಸಿ.ಆರ್.ಎಫ್. ಮತ್ತು ನಬಾರ್ಡ್ ಯೋಜನೆಯಡಿ ಮಂಜೂರಾದ ಎಲ್ಲಾ ರಸ್ತೆ ಕಾಮಗಾರಿಗಳು ಪೂರ್ಣಗೊಳಿಸಲಾಗಿದೆಯೇ?

ಆ) ಕಾಮಗಾರಿಗಳು ಅಪೂರ್ಣಗೊಂಡಿದ್ದಲ್ಲಿ ಕಾರಣಗಳೇನು ಮತ್ತು ಕೂಡಲೇ ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಇ) ಎಂ.ಡಿ.ಆರ್.ರಾಜ್ಯ ಹೆದ್ದಾರಿ ಮತ್ತು ವಿಶೇಷ ಅನುದಾನದಡಿ ರಸ್ತೆ ದುರಸ್ಥಿ ಕಾಮಗಾರಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು ?

ಈ) ಸದರಿ ಅನುದಾನದಡಿ ತೆಗೆದುಕೊಂಡ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆಯೇ? (ಇವುಗಳ ಗುಣಮಟ್ಟದ ವಿವರಣೆ ನೀಡುವುದು)

ಉ) ಅಪೂರ್ಣಗೊಂಡ ರಸ್ತೆ ರಿಪೇರಿ ಕಾರ್ಯಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ(ಲೋಪೋಪಯೋಗಿ ಮತ್ತು ಇಂಧನ ಸಚಿವರು) :

ಅ) ಸವದತ್ತಿ ತಾಲ್ಲೂಕಿನಲ್ಲಿ ಸಿಆರ್‌ಎಫ್ ಯೋಜನೆಯಡಿ 364.00 ಲಕ್ಷ ರೂ ಮೊತ್ತದ 5 ರಸ್ತೆ ಕಾಮಗಾರಿಗಳು ಮಂಜೂರಾಗಿದ್ದು, 3 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಹಾಗೂ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ನಬಾರ್ಡ್ ಯೋಜನೆಯಡಿ ಒಟ್ಟು 644 ಲಕ್ಷ ರೂ ಮೊತ್ತದ 11 ರಸ್ತೆ ಮತ್ತು 2 ಸೇತುವೆ ಕಾಮಗಾರಿಗಳು ಮಂಜೂರಾಗಿದ್ದು, 8 ರಸ್ತೆ ಮತ್ತು 1 ಸೇತುವೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಆ) ಸಿಆರ್‌ಎಫ್ ನೆರವಿನಡಿ ಕೈಗೊಂಡಿರುವ ಉಳಿದ 2 ರಸ್ತೆ ಕಾಮಗಾರಿಗಳ ಪೈಕಿ 1 ಕಾಮಗಾರಿಯು ಪ್ರಗತಿಯಲ್ಲಿದ್ದು, ಇನ್ನೊಂದು ಕಾಮಗಾರಿಗೆ ಗುತ್ತಿಗೆ ನಿಗಧಿಪಸಿಸಬೇಕಿದೆ.(04–05–2005ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ) ನಬಾರ್ಡ್ ನೆರವಿನಡಿ 1ರಸ್ತೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಹಾಗೂ 2 ರಸ್ತೆ ಹಾಗೂ 1 ಸೇತುವೆ ಕಾಮಗಾರಿಗಳಿಗೆ ಗುತ್ತಿಗೆ ನಿಗಧಿಪಡಿಸಬೇಕಿದೆ. ಎಲ್ಲಾ ಕಾಮಗಾರಿಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲಾಗುವುದು.

ಇ) 2004–05ನೇ ಸಾಲಿನಲ್ಲಿ ಸವದತ್ತಿ ತಾಲ್ಲೂಕಿಗೆ ವಿಶೇಷ ಅನುದಾನದಡಿ ರಾಜ್ಯ ಹೆದ್ದಾರಿಗಳ ದುರಸ್ತಿಗೆ 64.00 ಲಕ್ಷ ರೂ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ದುರಸ್ತಿಗೆ 216 ಲಕ್ಷರೂ ಅನುದಾನ ಬಿಡುಗಡೆಯಾಗಿರುತ್ತದೆ.

ಈ) ಮೇಲಿನ ಅನುದಾನದಲ್ಲಿ ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಒಟ್ಟು 18 ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ಇದರಲ್ಲಿ 8 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಇನ್ನುಳಿದ 10 ಕಾಮಗಾರಿಗಳು ಮುಕ್ತಯದ ಹಂತದಲ್ಲಿ ಇರುತ್ತವೆ. ರಾಜ್ಯ ಹೆದ್ದಾರಿಗಳ ಮೇಲೆ ಕೈಗೊಂಡಿರುವ 18 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಪೂರ್ಣಗೊಂಡ ಕಾಮಗಾರಿಗಳ ಗುಣಮಟ್ಟ ತೃಪ್ತಿಕರವಾಗಿರುತ್ತದೆ. ಪ್ರಗತಿಯಲ್ಲಿರುವ ಕಾಮಗಾರಿಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ಕಾಲಕಾಲಕ್ಕೆ ಗುಣನಿಯಂತ್ರಣ ಪರೀಕ್ಷೆಗಳನ್ನು ನಿಯಮಾನುಸಾರ ಕೈಗೊಳ್ಳಲಾಗುತ್ತಿದೆ.

ಉ) ಅಪೂರ್ಣಗೊಂಡ ಕಾಮಗಾರಿಗಳಲ್ಲಿ ಮರು ಡಾಂಬರೀಕರಣ ಇರುವುದರಿಂದ

ಮಳೆಗಾಲದ ನಂತರ ಪೂರ್ಣಗೊಳಿಸಲಾಗುವುದು.

5281(6174) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ(ಪರಸಗಡ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವದತ್ತಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ರಾಮಾಪುರ ಬಡಾವಣೆಯಲ್ಲಿ ಕ್ರೀಡಾಂಗಣ ನಿರ್ಮಾಣವಾಗಿದ್ದು ಯಾವಾಗ;

ಆ) ಈ ಕ್ರೀಡಾಂಗಣದ ಕಟ್ಟಡ, ಅವರಣಗೋಡೆ ಮತ್ತು ಗೇಟ್ ಶಿಥಿಲಗೊಂಡಿದ್ದು ಇವುಗಳ ದುರಸ್ಥಿಗಾಗಿ ಸರ್ಕಾರ ಕೈಗೊಂಡ ಕ್ರಮವೇನು;

ಇ) ಇದರ ನಿರ್ವಹಣೆಗಾಗಿ ಈವರೆಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು;

ಈ) ಈ ಕ್ರೀಡಾಂಗಣವನ್ನು ನೋಡಿಕೊಳ್ಳಲು ಕಾವಲುಗಾರರನ್ನು ನೇಮಕ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜಬ್ಬಾರ್‌ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು) :

ಅ) ಆಗಸ್ಟ್ 1998 ರಲ್ಲಿ ನಿರ್ಮಾಣವಾಗಿದೆ.

ಆ) ಸದರಿ ಕ್ರೀಡಾಂಗಣದ ದುರಸ್ತಿ ಕಾಮಗಾರಿಗಳನ್ನು ತಾಲ್ಲೂಕು ಕ್ರೀಡಾಂಗಣ ಸಮಿತಿಯ ಮೂಲಕ ಕೈಗೆತ್ತಿಕೊಳ್ಳಲು ಕರ್ನಾಟದ ಭೂ ಸೇನಾ ನಿಗಮದವರಿಂದ ಅಂದಾಜು ವೆಚ್ಚ ಪಟ್ಟಿ ಪಡೆದು ಕ್ರಮ ಜರುಗಿಸಲಾಗುವುದು.

ಸರ್ಕಾರಿ ಆದೇಶ ಸಂಖ್ಯೆ ವಾಪ್ರಯು 202 ಯುಸೇಕ್ರೀ 93 ದಿನಾಂಕ 12–1–94 ರಂತೆ ಅಂದಾಜು ವೆಚ್ಚ ರೂ. 15.49 ಲಕ್ಷಗಳಿಗೆ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಿ ಈ ಯೋಜನೆಯನ್ನು ಜಿಲ್ಲಾ ಪಂಚಾಯತ್‌ನಿಂದ ಕಾರ್ಯಗತಗೊಳಿಸಲು ಆದೇಶಿಸಿದೆ. ಈವರೆಗೆ ಜಿಲ್ಲಾ ಪಂಚಾಯತ್‌ನಿಂದ ರೂ. 12,95,500/–ಗಳು ಬಿಡುಗಡೆಯಾಗಿರುತ್ತದೆ. 2004–05ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಯೋಜನೆಯಡಿಯಲ್ಲಿ ರೂ. 91.000/–ಗಳ ಅನುದಾನ ಹಂಚಿಕೆಯಾಗಿದ್ದು ಸದರಿ ಹಣದಲ್ಲಿ ಅವಶ್ಯಕ ದುರಸ್ತಿ ಕಾರ್ಯಗಳನ್ನು ತಾಲ್ಲೂಕು ಕ್ರೀಡಾಂಗಣ ಸಮಿತಿಯು ಕೈಗೆತ್ತಿಕೊಳ್ಳಲು ಸೂಚಿಸಲಾಗುವುದು.

ಈ) ಈ ಮೊದಲು ಕ್ರೀಡಾಂಗಣ ಸಮಿತಿಯಿಂದ ನೇಮಕ ಮಾಡಿದ ಕಾವಲುಗಾರನು ಸಂಬಳ ಕಡಿಮೆಯಾಗುವುದೆಂದು (ಮಾಸಿಕ ರೂ. 1000/–) ಕೆಲಸ ಬಿಟ್ಟಿರುತ್ತಾನೆ. ಕಾವಲುಗಾರರನ್ನು ನೇಮಕ ಮಾಡಿಕೊಳ್ಳಲು ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

5282(6175) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವದತ್ತಿ ತಾಲ್ಲೂಕಿನ ವಿದ್ಯುತ್ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆ ಖಾಲಿ ಇದ್ದು ಪ್ರಭಾರ ವ್ಯವಸ್ಥೆಯಿಂದ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ